ಪರಮಾನಂದ ಕೆಲವು ಸೂಚನೆಗಳ ಮೊದಲೆ ಕೊಟ್ಟಿದ್ದ. ಅದಕ್ಕೆ ತಕ್ಕಂತೆ ರೆಡಿಯಾಗಿದ್ದೆವು. ನಾನು, ನನ್ನ ಗುರುಗಳು ಹಾಗೂ ಬಂಡಾಯದ ಗೆಳೆಯ ಗೋವಿಂದ ಮತ್ತು ಪರಮಾನಂದ. ಗೋವಿಂದ ಬಡಪಾಯಿ. ಮೈಸೂರಿನ ತುಂಬ ಅವನಿಗೆ ಗೆಳೆಯರು. ಗೋವಿಂದನಿಗೆ ಬೋರ್‌ವೆಲ್ ರಿಪೇರಿಯಿಂದ ಹಿಡಿದು ದಿನ ಬಳಕೆಯ ಇಂತಹ ಕೆಲಸ ಗೊತ್ತಿಲ್ಲ ಎನ್ನುವಂತಿಲ್ಲ. ಎಲ್ಲ ಕಸುಬುಗಳ ಕಲಿತಿದ್ದ. ಗೆಳೆಯರೆಲ್ಲ ಇವನನ್ನೆ ಅವಲಂಬಿಸಿದ್ದರು. ಪೋನ್ ಬಂದ ಕೂಡಲೆ ಲಡಾಸು ಟಿ.ವಿ.ಎಸ್.ಮೊಪೆಡ್ ಅನ್ನು ಹತ್ತಾರು ಸಲ ಕಿಕ್ ಮಾಡಿ ರಸ್ತೆಯಲ್ಲಿ ಹೋಗುವ ಜನರ ಉಸಿರು ಗಟ್ಟಿಸುವಂತೆ ದಟ್ಟ ಕಪ್ಪು ಹೊಗೆ ಬಿಟ್ಟುಕೊಂಡು ಹೋಗಿ ರಿಪೇರಿ ಮಾಡಿ ಯಾವ ಫಲಾಪೇಕ್ಷೆಯು ಇಲ್ಲದೆ ಸಮಾಜ ಸುಧಾರಕನಂತೆ ಪೆಚ್ಚು ಮೋರೆ ಹಾಕಿಕೊಂಡು ಚಹಾದ ಜೊತೆಗೆ ಸಿಗರೇಟು ಸೇದಿ ಎಲ್ಲೊ ಕಳೆದು ಹೋಗುತ್ತಿದ್ದ. ಅಂತಹ ಶ್ರೀಮಂತನ ವಿದೇಶಿ ವಿಸ್ಕಿಯ ಪಾರ್ಟಿಗೆ ಗೋವಿಂದ ಇದ್ದರೆ ಚೆನ್ನಾಗಿರುತ್ತದೆ ಎಂದು ಪರಮಾನಂದನೆ ಆಯ್ಕೆ ಮಾಡಿದ್ದ. ನನ್ನ ಗುರುಗಳು ಬಾರೀ ವಿಚಾರವಾದಿಗಳು. ಕವಿಗಳು... ಮುಖ್ಯವಾಗಿ ಸ್ತ್ರೀ ಪಕ್ಷಪಾತಿಗಳು. ಗೋವಿಂದನನ್ನು ಪರಮಾನಂದ ತನ್ನ ಕಾರಲ್ಲಿ ಕೂರಿಸಿಕೊಂಡಿದ್ದ. ಒಳ್ಳೆಯ ಬಟ್ಟೆ ಧರಿಸಿದ್ದ. ಅದೇ ಮೊದಲ ಬಾರಿಗೆ ಬೀಡಿ ಬೆಂಕಿ ಪೆಟ್ಟಿಗೆಯ ಅತ್ತ ಬಿಸಾಡಿ; ವಿದೇಶಿ ಸಿಗಾರ್ ಹಾಗೂ ಟಳಕ್ ಎನಿಸಿ ಬೆಂಕಿ ಹೊತ್ತಿಸಿಕೊಳ್ಳುವ ಲೈಟರನ್ನು ಜೇಬಲ್ಲಿ ವಿಶೇಷವಾಗಿ ಸಿಕ್ಕಿಸಿಕೊಂಡು ಆಗಾಗ ಬಟ್ಲರ್ ಇಂಗ್ಲಿಷಿನಲ್ಲಿ ಡೈಲಾಗ್ ಪ್ರಯೋಗಿಸುತ್ತ 'ಗುಡ್, ಬ್ಯಾಡ್, ಅಗ್ಲೀ' ಸಿನಿಮಾದ ನಾಯಕ ಸಿಗಾರನ್ನು ಬಾಯ ಅತ್ತಿತ್ತ ಆಡಿಸುವಂತೆ ರಿಹರ್ಸಲ್ ಮಾಡಿಕೊಂಡು ತುಂಬ ಉತ್ಸಾಹದಲ್ಲಿದ್ದ. ನನ್ನ ಗುರುಗಳು ಕೋಕಿಲೇಶ್ವರ ರಾವ್ ತಮ್ಮ ಹಳೆಕಾಲದ ಆ್ಯಂಟಿಕ್ ಕಾರಲ್ಲಿ ಬಂದಿದ್ದರು. ನಾನು ನನ್ನ ಹೊಸ ಕಾರಲ್ಲಿ ಅವರ ಸೇರಿಕೊಂಡಿದ್ದೆ. ಸಮಯಕ್ಕೆ ಸರಿಯಾಗಿ ಅವರ ಮನೆ ಮುಂದೆ ನಮ್ಮ ಮೂರು ಕಾರುಗಳು ನಿಂತವು. ಶ್ರೀಮಂತನ ಜೊತೆಯ ಸಂತೋಷ ಕೂಟದಲ್ಲಿ ಏನೇನು ಮಾತಾಡಬೇಕು ಎಂದು ಗುರುಗಳು ಸಿದ್ಧವಾಗಿ ಬಂದಿದ್ದರು.

ಆ ಗ್ರಾನೈಟ್ ಅಸಾಮಿಯ ಮನೆಯ ಸುತ್ತ ಸರ್ಪಗಾವಲಿತ್ತು. ಗೇಟಲ್ಲಿಯೇ ಭಕ್ಷಕ ನಾಯಿಗಳು ನಮ್ಮ ಕಂಡೊಡನೆಯೇ ಬಗೆದು ಹಾಕುವಂತೆ ಬೊಗಳುತ್ತಿದ್ದವು. ನಗರದ ಹೊರವಲಯದ ಹತ್ತು ಎಕರೆ ಜಾಗದ ಒಳಗೆ ಅದ್ದೂರಿ ಅರಮನೆ ಇತ್ತು. ಅಲ್ಲಿನ ಪರಿಸರ ನೋಡಿಯೇ ತಾವು ಏನೊ ತಪ್ಪು ಮಾಡುತ್ತಿದ್ದೇವೆ ಎನಿಸಿತು. ಹೆಜ್ಜೆ ಹೆಜ್ಜೆಗೂ ಪರೀಕ್ಷಿಸಿದರು. ಏನಾದರು ವೆಪನ್‌ಗಳ ಬಚ್ಚಿಟ್ಟುಕೊಂಡಿರುವರೇ ಎಂಬುದನ್ನು ಯಂತ್ರಗಳು ಹೈಟೆಕ್ಕಾಗಿ ಪರಿಶೀಲಿಸಿ ಗ್ರೀನ್ ಸಿಗ್ನಲ್ ತೋರುತ್ತಿದ್ದವು. ವಿಶಾಲವಾದ ಪ್ರಾಂಗಣ ತಂಪಾಗಿತ್ತು. ಅದ್ದೂರಿ ಲಾನ್. ವಿದೇಶಿ ಹೂಗಿಡ ಬಳ್ಳಿಗಳು. ಅಲ್ಲಲ್ಲೆ ನೆರಳಿನಂತೆ ಕಾವಲುಗಾರರು. ನಮ್ಮ ಗುರುಗಳು; ಒಬ್ಬಳಾದರೂ ನೀಳ ಕೂದಲ ಚೆಲುವೆ ಈ ಸುಂದರ ಹೂದೋಟದಲ್ಲಿ ಬಳುಕುತ್ತ ಹೋಗಿದ್ದರೆ ಎಷ್ಟು ಚೆಂದವಿರುತ್ತಿತ್ತು ಎಂದು ಇಲ್ಲಿ ಸೌಂದರ್ಯ ಹೆಣ್ಣಿಲ್ಲದೆ ಮುಕ್ಕಾಗಿ ಬಿದ್ದಿದೆ ಎಂದು ಲೊಚಗರೆದರು. ನಾವು ಬಂದು ಲಾನಿನಲ್ಲಿ ಕೂತಿರುವುದು ಆ ಅಗರ್ಭ ಶ್ರೀಮಂತನಿಗೆ ಮಾಯಾಕನ್ನಡಿಯಲ್ಲಿ ಆಗಲೆ ಗೊತ್ತಾಗಿತ್ತು. ಬಂದವರನ್ನು ದಿಢೀರನೆ ಆ ಗಣ್ಯನೆ ಬಂದು ಸ್ವಾಗತಿಸುವ ಪದ್ಧತಿ ಅಲ್ಲಿರಲಿಲ್ಲ. ಎಲ್ಲ ಸರಿ ಇದೆ ಎನಿಸಿ ಆದ ನಂತರ ತಡವಾಗಿ ಬರುವುದು ಅವರ ರೂಢಿ.

ಅದು ಇದು ಹರಟುತ್ತಿದ್ದೆವು. ಅಪರಿಚಿತ ದೈತ್ಯರು ಬಂದು ನೋಡಿಕೊಂಡು ಹೋದರು. ನನ್ನ ಗುರುಗಳು ಮಾಜಿ ಕುಲಪತಿ ಕೂಡ ಆಗಿದ್ದರು. ಆದರೆ ಅಂತಹ ಯಾವ ಅರ್ಹತೆಗಳು ಅಲ್ಲಿ ಲೆಕ್ಕಕ್ಕೆ ಬರುತ್ತಿರಲಿಲ್ಲ. ಆ ಶ್ರೀಮಂತನಿಗೆ ನಾವು ಕೇವಲ ಬಡಪಾಯಿ ಲೇಖಕರು... ವಿಚಾರವಂತರು. ಬಡವರ ಪರವಾಗಿ ಮಾತನಾಡುವ ಕಲಾವಿದರು. ನಮಗೂ ಒಂದೊಂದು ಗಣ್ಯತೆ ಪ್ರಾವೀಣ್ಯತೆ ಇದೆ ಎಂಬುದೆ ಅಲ್ಲಿ ನಯಾ ಪೈಸೆಗೂ ಬೆಲೆ ಇರಲಿಲ್ಲ. ಮಜಾ ಮಾಡಲು ಏನೆಲ್ಲ ಬೇಕೊ ಹಾಗೆ ವಿನ್ಯಾಸಗೊಂಡಿದ್ದ ಲಾನು. ಗೋವಿಂದ ಅಂಬಾನಿ ಕಡೆಯವರಂತೆ ಅಭಿನಯಿಸುತ್ತಿದ್ದ. ಅವನ ಮ್ಯಾನರಿಸಂಗಳು ನಮಗೇ ಇರಿಸು ಮುರಿಸು ತರುತ್ತಿದ್ದವು. ಬಫೂನನಂತೆ ವರ್ತಿಸುತ್ತಿದ್ದ. ಅವನ ಇಂಗ್ಲಿಷ್ ಅವನಿಗೇ ತಿಳಿಯುತ್ತಿರಲಿಲ್ಲ. ಏನೇನೊ ಒದರುತ್ತಿದ್ದ. ಅಂತಹ ಕತ್ತಲ ಹೊತ್ತಲ್ಲಿ ಕೂಲಿಂಗ್ ಗ್ಲಾಸ್ ಧರಿಸಿ ಕೌವ್‌ಬಾಯ್ ಕ್ಯಾಪ್ ಹಾಕಿ ಸಿಗರೇಟು ಸೇದುವುದು ಬಹಳ ಕಾಸ್ಟ್ಲೀ ಆಗಿತ್ತು. ಒಮ್ಮೆಗೇ ಒಂದು